# ಸ್ವಾತಂತ್ರ್ಯ ದೇವಿಯ ಮಾನವ ಪ್ರತಿಮೆ



ಅಮೆರಿಕಾ ಎಂದೊಡನೆ ಪಕ್ಕನೆ ನೆನಪಾಗುವುದು ನ್ಯೂಯಾರ್ಕ್‌ನಲ್ಲಿರುವ ಸ್ವಾತಂತ್ರ್ಯ ದೇವಿಯ ಪ್ರತಿಮೆ (ಸ್ಟ್ಯಾಚೂ ಆಫ್ ಲಿಬರ್ಟಿ). ಅದನ್ನೇ ಹೋಲುವ ಈ ಫೋಟೋ ಗಮನಿಸಿ.

1918ರಲ್ಲಿ ಅತೀ ಅಪರೂಪದ ಈ ಫೋಟೋವನ್ನು ತೆಗೆಯಲಾಗಿದೆ. ಇದು ಮನುಷ್ಯರೇ ತುಂಬಿಕೊಂಡಿರುವ ಸ್ವಾತಂತ್ರ್ಯ ದೇವಿಯ ಪ್ರತಿಮೆ! 18,000 ಸೈನಿಕರು ಯುದ್ಧಕ್ಕೆ ಸಿದ್ಧವಾಗುವಾಗ ಕ್ಯಾಂಪ್ ಡೋಡ್ಜ್ ಲೊವಾ ಎಂಬಲ್ಲಿ ನಡೆದ ತರಬೇತಿ ಶಿಬಿರದಲ್ಲಿ ಈ ಫೋಟೊ ತೆಗೆಯಲಾಗಿದೆ. ಈ ಚಿತ್ರದಲ್ಲಿ ಕೆಳ ಭಾಗದಿಂದ ಭುಜದವರೆಗಿನ ಎತ್ತರ 150 ಅಡಿಗಳಿಷ್ಟಿದ್ದು, ಮುಖವು 60 ಅಡಿ, ಮೂಗು 21 ಅಡಿ ಹಾಗೂ ತಲೆಭಾಗದ ಮೊನಚಾದ ತುದಿಯು 70 ಅಡಿಗಳಷ್ಟಿದೆ. ಎಡಗೈ ಉದ್ದ 30 ಅಡಿಗಳಿದ್ದರೆ, ಜ್ವಾಲೆಯೊಂದಿಗಿರುವ ದೀವಟಿಗೆಯು 980 ಅಡಿಗಳಷ್ಟಿದೆ. ಜ್ವಾಲೆ ಭಾಗದಲ್ಲಿರುವ ಒಟ್ಟು ಜನರು 12,000. ದೀವಟಿಗೆ ಭಾಗದಲ್ಲಿ 2800 ಜನ, ಬಲಗೈನಲ್ಲಿರುವ ಜನ 1200 ಹಾಗೂ ದೇಹ, ತಲೆ ಮತ್ತು ಉಳಿದ ಭಾಗಗಳಲ್ಲಿ ಒಟ್ಟು 2000 ಜನರಿದ್ದಾರೆ. ಬರೋಬ್ಬರಿ 18,000 ಜನರನ್ನು ಅತ್ಯಂತ ಕಲಾತ್ಮಕ ರೀತಿಯಲ್ಲಿ ಒಂದುಗೂಡಿಸಿ ತೆಗೆದ ಈ ಫೋಟೊ ನಿಜಕ್ಕೂ ಅದ್ಭುತವೇ ಹೌದು!

-ವಿದ್ಯಾ ವಿ ಹಾಲಭಾವಿ